7. ವಿಷಯ: ಅರಸೀಕೆರೆ ತಾಲ್ಲೂಕಿನ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಲೇಖನ ಸಾಮಗ್ರಿಗಳು (ಪೇಪರ್) ಅಭಾವವಿರುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ ಪೇಪರ್ ಇಲ್ಲದೇ 15 ದಿವಸಗಳಿಂದ ರೈತರಿಗೆ ಪಹಣಿ ವಗೈರೆ ಯಾವುದೂ ಸರಬರಾಜು ಆಗುತ್ತಿಲ್ಲ. ಟೆಂಡರ್ ತೆಗೆದುಕೊಂಡಿರುವಂಥವರು ಆ ಪೇಪರ್ ಅನ್ನು ಭದ್ರಾವತಿ ಪೇಪರ್ ಮಿಲ್ಸ್‌ಗೆ ಕೊಟ್ಟಿದ್ದೆವು, ನಮಗೆ supply ಇಲ್ಲ ಏನು ಮಾಡೋಣ? ಎಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ರೈತರು ಅಲ್ಲಿ ನಮಗೆ ಧಿಕ್ಕಾರ ಕೂಗುತ್ತಾರೆ. ಕರ್ನಾಟಕ ರಾಜ್ಯದಲ್ಲೆಲ್ಲಾ ಏನಾಗಿದೆಯೋ ನನಗೆ ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲಂತೂ ಈ ಪೇಪರ್ ಅಭಾವದಿಂದ ಸರಿಯಾದ ರೀತಿಯಲ್ಲಿ ಆ ಕೇಂದ್ರ ನಡೆಯದೇ, ರೈತರಿಗೆ ಬಹಳ ತೊಂದರೆಯಾಗಿದೆ. ದಯವಿಟ್ಟು ಇದಕ್ಕೆ ಶೀಘ್ರದಲ್ಲಿ ಪರಿಹಾರವನ್ನು ಒದಗಿಸಬೇಕೆಂದು, ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ಲೇಖನ ಸಾಮಗ್ರಿ ಕೊರತೆಯಿಂದ ಜನರಿಗೆ ತೊಂದರೆಯಾಗಿದೆ. ಉತ್ತರ ಇದ್ದರೆ ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ನಾಡ ಕಛೇರಿಗಳಿಗೆ ತೊಂದರೆಯಾಗಿಲ್ಲ. ಅಲ್ಲಿ ಕೊಡುವಂತಹ ಲೇಖನ ಸಾಮಗ್ರಿಗಳು ಡಿ.ಸಿ.ಗಳಿಂದ ಏನು supply ಆಗುತ್ತದೆ ಅದು ಆಗುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ಭದ್ರಾವತಿ ಪೇಪರ್ ಕಾರ್ಖಾನೆಗೆ ಭೂಮಿ ಉಸ್ತುವಾರಿ ಕೋಶದಿಂದ ಅವರಿಗೆ ಕೊಟ್ಟಿರುವಂಥದ್ದು. ತಮಗೆ ಗೊತ್ತಿರುವ ಹಾಗೆ Central Pollution Control Board ನವರು ಸದ್ಯಕ್ಕೆ ನಿಲ್ಲಿಸಿದ್ದಾರೆ. ಆದ್ದರಿಂದ ನಾವು ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಬೇರೆಯವರಿಗೆ ಅದನ್ನು ಕೊಟ್ಟು ಆದಷ್ಟು ಬೇಗನೆ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು. ಭದ್ರಾವತಿ ಪೇಪರ್ ಮಿಲ್ಸ್ close ಆದಾಗಿನಿಂದ ಈ ಸಮಸ್ಯೆ ಬಂದಿದೆ. ಅವರಿಂದ

ನಾವು ಬೇರೆ ಏಜೆನ್ಸಿಗಳಿಗೆ ಕೊಟ್ಟು ಪರ್ಯಾಯ ವ್ಯವಸ್ಥೆ ಮಾಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ಪಹಣಿ ಪತ್ರಕ್ಕಾಗಿ 50 ಕಿ.ಮೀ. ಹೋಗುತ್ತಾರೆ.

ಅಧ್ಯಕ್ಷರು:– ಶ್ರೀ ಅಪ್ಪಾಜಿಯವರು ಹಾಜರಿಲ್ಲ. ಮಾನ್ಯ ಹೆಚ್.ಎಸ್. ಪ್ರಕಾಶ್‌ರವರು ಮಾತನಾಡುವುದು.

8. ವಿಷಯ: ನಗರಸಭೆಯ ಅವಿಶ್ವಾಸ ನಿರ್ಣಯ ಸಭೆಯಲ್ಲಿ ನೂರಾರು ಪೊಲೀಸರನ್ನು ಹಾಕಿ ಸಭೆ ನಡೆಸಿರುವ ಬಗ್ಗೆ.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ):– ಮಾನ್ಯ ಅಧ್ಯಕ್ಷರೆ, ನಗರಸಭೆಯ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಸಭೆಗಿಂತ ಮುಂಚೆ ನೂರಾರು ಪೊಲೀಸರನ್ನು ಹಾಕಿ ಸಭೆ ಮಾಡಿದ್ದಾರೆ ಎಂದು ಮೊನ್ನೆಯೂ ಕೂಡ ಕೇಳಿದ್ದೆ. ಇಲ್ಲೇ ಮಾನ್ಯ ಗೃಹಸಚಿವರು ಹೇಳಿದರು. ಒಬ್ಬರು ಸದಸ್ಯರನ್ನು ಕರೆದುಕೊಂಡು ಹೋಗಿದ್ದರು, ಅಧ್ಯಕ್ಷರಲ್ಲ ಅವರು ಬಂದು surrender ಆಗುತ್ತಾರೆ ಎಂದು ಉತ್ತರವನ್ನೂ ಕಳುಹಿಸಿದ್ದಾರೆ. ಎಲ್ಲಾ ಅವಿಶ್ವಾಸ ನಿರ್ಣಯ ಆದಮೇಲೆ produce ಮಾಡುತ್ತಾರೆ. ಬೇಲ್ ತೆಗೆದುಕೊಂಡು ಅಧ್ಯಕ್ಷರನ್ನು ಕರೆದುಕೊಂಡು ಬಂದು ಕೂರಿಸಿಕೊಳ್ಳುತ್ತಾರೆ. ಇವತ್ತು ಸಭೆ ಪ್ರಾರಂಭ ಮಾಡುವುದಕ್ಕೆ ಮುಂಚೆ ನೂರಾರು ಪೊಲೀಸರನ್ನು ಹಾಕಿ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವುದಾದರೆ ಇವರು ಪೊಲೀಸರನ್ನು ಇಟ್ಟುಕೊಂಡು ಮೀಟಿಂಗ್ ಮಾಡಬೇಕು. ಫೋಟೋ ಸಮೇತ ಇಲ್ಲೇ ಇದೆ, ಅದನ್ನು ಕೊಡುತ್ತೇನೆ. ದಯಮಾಡಿ ಅದನ್ನು ನೋಡಿ. ಒಬ್ಬರಲ್ಲ ನೂರಾರು ಜನ ಪೊಲೀಸರು ಇದ್ದಾರೆ.